# ನೆಲೆಗೊಳ್ಳುವ ಛಲದಿಂದ ನಟನಾದೆ



**ಅಭಿಷೇಕ್ ದಾಸ್**

**ಉದಯದ 'ಸರಯೂ'ದ ಅಭಿರಾಮ ದೇಶಪಾಂಡೆ**

★ *ನಿಮ್ಮ ಬಾಲ್ಯದ ದಿನಗಳು ಹೇಗಿದ್ದವು?*

ನಮ್ಮದು ಸಾಧಾರಣ ಮಧ್ಯಮ ವರ್ಗದ ಕುಟುಂಬ. ಊರು ಮೈಸೂರು. ಅಪ್ಪ ರಾಮದಾಸ್. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಅಮ್ಮ ಭಾಗ್ಯಲಕ್ಷ್ಮಿ ಅವರು ಓದಿಲ್ಲ. ಅಪ್ಪ ನನಗೆ ಅವರ ಹಣಕಾಸಿನ ಸ್ಥಿತಿಗತಿಯ ಬಗ್ಗೆ ಗೊತ್ತಾಗದಂತೆ ಸಾಕಿದರು. ಯಾವುದಕ್ಕೂ ಕೊರತೆ ಮಾಡಿರಲಿಲ್ಲ. ಅವರ ಅಕಾಲಿಕ ನಿಧನದಿಂದ ನಮ್ಮ ಕುಟುಂಬಕ್ಕೆ ಕಷ್ಟದ ದಿನಗಳು ಆರಂಭವಾದವು. ಮನೆಯ ಹತ್ತಿರ ಸಾಲಗಾರರೂ ಬರತೊಡಗಿದರು. ಏನಾದರೂ ಮಾಡಿ ಮೇಲೆ ಬರಬೇಕು. ನಾಲ್ಕು ಜನ ಗುರುತಿಸುವಂತೆ ಬೆಳೆಯಬೇಕು ಎಂಬ ಛಲ ಚಿಗುರೊಡೆಯಿತು. ಈಜು ಪಟು ಆಗಬೇಕೆಂದು ದಿನದಲ್ಲಿ ಐದಾರು ತಾಸು ನಿರಂತರ ನೀರಿನಲ್ಲಿಯೇ ಮುಳುಗಿ ಎದ್ದೆ. ರಾಷ್ಟ್ರೀಯ ಸ್ಪರ್ಧೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದೆ. ಕೋಲ್ಕತ್ತಾದಲ್ಲಿ 2014ರಲ್ಲಿ ಜರುಗಿದ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದೆ. ಆ ನಂತರ ಅಲ್ಲಿನ ಕಹಿ ಅನುಭವ ಅದರಿಂದ ಹೊರ ಬರುವಂತೆ ಮಾಡಿತು. ಅಲ್ಲಿಂದ ಬಂದು ಮಾಡೆಲಿಂಗ್ ಪ್ರವೇಶ ಮಾಡಿದೆ.

★ *ನಟನೆಯನ್ನು ಆರಂಭಿಸಿದ್ದು ಹೇಗೆ?*

ಕುಟುಂಬದ ಜವಾಬ್ದಾರಿ ನನ್ನ ಮೇಲೆ ಬಂತು. ಸಂಪಾದನೆಗೆ ಮಾರ್ಗ ಹುಡುಕ ತೊಡಗಿದೆ. ಸಿನಿಮಾ– ಧಾರಾವಾಹಿಗಳಿಗೆ ಆಡಿಷನ್ ನೀಡಲು ಪ್ರಾರಂಭಿಸಿದೆ. ಹೇಗಾದರೂ ಮಾಡಿ ಸಿನಿಮಾದಲ್ಲಿ ನಟಿಸಬೇಕು ಎನ್ನುವ ಬಯಕೆ ಕಾಡತೊಡಗಿತ್ತು. ಅಷ್ಟರಲ್ಲಿ ಝೀ ಕನ್ನಡದ 'ಲೈಫ್ ಸೂಪರ್ ಗುರು' ರಿಯಾಲಿಟಿ ಶೋ ಮಾಡಿದೆ. ಅದರಲ್ಲಿ ಮೂರನೇ ಸ್ಥಾನ ಪಡೆದೆ. ನಂತರ ಸುವರ್ಣದಲ್ಲಿ 'ಡಾನ್ಸ್ ಡಾನ್ಸ್' ಕಾರ್ಯಕ್ರಮದಲ್ಲಿ ಭಾಗಿಯಾದೆ. ಅದರಲ್ಲಿ ಟಾಪ್ ಐವರಲ್ಲಿ ನಾನೂ ಒಬ್ಬ ಡಾನ್ಸರ್ ಆಗಿ ಹೊರಹೊಮ್ಮಿದೆ. ಅದು ನನಗೆ ಆತ್ಮವಿಶ್ವಾಸವನ್ನು ತುಂಬಿತು. ಅಷ್ಟರಲ್ಲಿ 'ಸರಯೂ'ಗೆ ಅವಕಾಶ ಸಿಕ್ಕಿತು. ನಾಯಕ ಪಾತ್ರ. ನನಗಿನ್ನೂ 20 ವರ್ಷ. ಅದಕ್ಕೆ ತುಂಬಾ ಜನ ಧಾರಾವಾಹಿಯಲ್ಲಿ ನಾಯಕನ ಪಾತ್ರ ನಿರ್ವಹಿಸುವ ಚಿಕ್ಕವಯಸ್ಸಿನ ಹುಡುಗ ಎಂದು ಪ್ರಶಂಸಿಸುತ್ತಾರೆ.

ಮೈಸೂರಿನಲ್ಲಿ ಬಿಸಿಎ ಓದುತ್ತಿದ್ದೇನೆ. ಚಿತ್ರೀಕರಣಕ್ಕೆ ಬಿಡುವು ಸಿಕ್ಕಾಗ ಕಾಲೇಜಿಗೆ ಹೋಗುತ್ತೇನೆ. ಕಾಲೇಜಿನ ಪ್ರಾಂಶುಪಾಲರು ಮತ್ತು ಸಿಬ್ಬಂದಿ ನನ್ನ ಬೆಂಬಲಕ್ಕೆ ಇದ್ದಾರೆ. ಓದು– ನಟನೆ ಎರಡನ್ನೂ ನಿಭಾಯಿಸುತ್ತಿದ್ದೇನೆ. ಮುಂದೆ ಸಂಪೂರ್ಣ ನಟನೆಯಲ್ಲೇ ತೊಡಗುತ್ತೇನೆ.

★ *ನಿಮ್ಮ ಕಂಠವನ್ನು ಬಳಸುವ ಬಗ್ಗೆ ಯೋಚನೆ ಇಲ್ವಾ?*

ನನ್ನ ಧ್ವನಿ ಬಗ್ಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಶೂಟಿಂಗ್ ಮನೆಯಲ್ಲಿಯೂ ನನ್ನ ದನಿ ಸ್ಪಷ್ಟತೆಗೆ ಮಾನ್ಯತೆ ಸಿಕ್ಕಿದೆ. ಅದನ್ನು ಇನ್ನೂ ದುಡಿಸಬೇಕು ಎನ್ನುವ ಆಸೆ ನನಗೂ ಇದೆ. ರಿಯಾಲಿಟಿ ಶೋ, ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನೂ ನಿರೂಪಿಸಬೇಕು ಎಂದುಕೊಂಡಿದ್ದೇನೆ.

★ *ಸರಯೂ ಚಿತ್ರೀಕರಣದ ಅನುಭವ ಹೇಗಿತ್ತು?*

ಅದ್ದೂರಿಗೇನೂ ಕಮ್ಮಿ ಇಲ್ಲದಂತೆ ಮಾಡಲಾಗುತ್ತಿದೆ. ಕನ್ನಡದ ಹೊಸ ಕಥೆ. ಇದನ್ನು ಬ್ಯಾಂಕಾಕ್‌ನಲ್ಲಿಯೂ ಚಿತ್ರೀಕರಣ ಮಾಡಿದ್ದು ವಿಶೇಷ. ಕ್ಯಾಮೆರ ಕಲೆ ಕೂಡ ಸೊಗಸಾಗಿದೆ. ನನಗೆ ಕ್ಯಾಮೆರಾ ಎದುರಿಸುವುದು ಸವಾಲೆಂದು ಅನ್ನಿಸಲಿಲ್ಲ. ಬಾಲ್ಯದಲ್ಲಿ ಆರ್ಕೆಸ್ಟ್ರಾಗಳಲ್ಲಿ ಡಾನ್ಸ್ ಮಾಡುತ್ತಿದ್ದೆ. ಆಮೇಲೆ ಮಾಡೆಲಿಂಗ್, ರಿಯಾಲಿಟಿ ಶೋಗಳಲ್ಲಿದ್ದ ಅನುಭವ ನೆರವಿಗೆ ಬಂದಿದೆ.

★ *ನಿಮ್ಮ ಪಾತ್ರದ ಬಗ್ಗೆ ಹೇಳುವುದಾದರೆ...*

ಅಭಿರಾಮ ದೇಶಪಾಂಡೆ (ಎಬಿಡಿ) ದೊಡ್ಡ ಸೆಲೆಬ್ರಿಟಿ ಮಗ. ಬದುಕೆಂದರೆ ಮೋಜು ಅಷ್ಟೇ ಎಂದು ಭಾವಿಸಿರುತ್ತಾನೆ. ಯಾವುದೇ ಜವಾಬ್ದಾರಿಗಳೂ ಇಲ್ಲದೆ ಹೆಂಡ– ಹೆಣ್ಣು ಎಂದು ಕಾಲ ಕಳೆಯುತ್ತಿರುತ್ತಾನೆ. ಆದರೆ ಕಥಾ ನಾಯಕಿ 'ಸರಯೂ' ನನಗೆ ಜೀವನದ ಮೌಲ್ಯದ ಅರಿವನ್ನು ಮೂಡಿಸುತ್ತಾಳೆ. ಇದು ಕಥೆಯ ಹೂರಣ.

★ *ಅವಕಾಶಗಳ ನಿರೀಕ್ಷೆಯಲ್ಲಿದ್ದವರಿಗೆ ಏನು ಹೇಳುತ್ತೀರಿ?*

ಸತತ ಪ್ರಯತ್ನ ಖಂಡಿತ ಕಾಪಾಡುತ್ತದೆ. ಕೆಲವೊಮ್ಮೆ ಅದೃಷ್ಟವೂ ಬೇಕಾಗುತ್ತದೆ. ಆದರೆ ಕಠಿಣ ಅಭ್ಯಾಸವಂತೂ ಇರಲೇ ಬೇಕು. ಕೆಲವರ ಸಲಹೆ ಸೂಚನೆಗಳೂ ಬೇಕಾಗಬಹುದು. ನನಗೆ ಉದಯ ಟಿವಿಯ ರಾಮೇಗೌಡ, ವರುಣ್ ಗೌಡ ಮಾರ್ಗದರ್ಶಕರು. ಎಲ್ಲಾ ಹಂತದಲ್ಲೂ ಅವರ ಸಲಹೆಯನ್ನು ಪಡೆಯುತ್ತೇನೆ. ಹೊಸಬರಿಗೆ ಸಾಕಷ್ಟು ಅವಕಾಶಗಳಂತೂ ಇವೆ. ಅದನ್ನು ಪಡೆಯುವ ಹಠ– ಪ್ರಯತ್ನ ಬೇಕು ಎನ್ನಿಸುತ್ತದೆ.

■ ರಾಗು